## <u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.</u>

<u>ಸಿಸಿ ನಂಬರ್ **129/2019**</u>

<u>ಫಿರ್ಯಾದಿ</u> ಹಾವೇರಿ ಶಹರ ಪೋಲಿಸ ಠಾಣೆ

ವಿರುದ್ದ

<u>ಆರೋಪಿತರು</u>

**1.** ವೀರುಪಾಕ್ಷಿ ಶಾಂತಪ್ಪ ಹಾವನೂರ
ವಯಾಃ **36** ವರ್ಷ**,** ಉದ್ಯೋಗಃ ವ್ಯಾಪಾರ
ಸಾಃ ಶಿವಲಿಂಗ ನಗರ**,** ಹಾವೇರಿ

**2.** ನಿಂಗಪ್ಪ ಶಾಂತಪ್ಪ ಹಾವನೂರ
ವಯಾಃ **39** ವರ್ಷ**,** ಉದ್ಯೋಗಃ ಮೆಕ್ಯಾನಿಕ್
ಸಾಃ ಶಿವಲಿಂಗ ನಗರ**,** ಹಾವೇರಿ

**3.** ಶಾಂತಪ್ಪ ನಿಂಗಪ್ಪ ಹಾವನೂರ
ವಯಾಃ **61** ವರ್ಷ**,** ಉದ್ಯೋಗಃ ಕೃಷಿ
ಸಾಃ ಶಿವಲಿಂಗ ನಗರ**,** ಹಾವೇರಿ

**4.** ಚನ್ನವ್ವ ಶಾಂತಪ್ಪ ಹಾವನೂರ
ವಯಾಃ **52** ವರ್ಷ**,** ಉದ್ಯೋಗಃ ಮನೆಗೆಲಸ
ಸಾಃ ಶಿವಲಿಂಗ ನಗರ**,** ಹಾವೇರಿ

**5.** ಸುರೇಶ ನೀಲಪ್ಪ ಆಲಳ್ಳಿ
ವಯಾಃ **24** ವರ್ಷ**,** ಉದ್ಯೋಗಃ ಕೂಲಿ
ಸಾಃದೇವಿಹೊಸೂರ ತಾಃಜಿಃ ಹಾವೇರಿ

### <u>ದೋಷಾರೋಪಣೆ</u>

ಶ್ರೀ ವಾಸುದೇವ.ಆರ್.ಗುಡಿ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಹಾವೇರಿ ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಣೆ ಮಾಡುವುದೇನೆಂದರೆ,

ದಿಃ02-10-2019 ರಂದು ಮುಂಜಾನೆ 9-30 ಗಂಟೆ ಸುಮಾರಿಗೆ ಆರೋಪಿತರಾದ ನೀವು ಪಿರ್ಯಾದಿದಾರರು ಅಡ್ಡಾಡುತ್ತಿದ್ದ ನಿಮ್ಮ ಖುಲ್ಲಾ ಜಾಗೆಯಲ್ಲಿ ಮಣ್ಣು ಹಾಕಿಸುತ್ತಿರುವದನ್ನು ನೋಡಿ ಪಿರ್ಯಾದಿ ಮತ್ತು ಪಿರ್ಯಾದಿದಾರನ ತಂದೆ ತಾಯಿ ಹಾಗೂ ತಮ್ಮಂದಿರರಾದ ಚಾ.ಸಾ-4 ರಿಂದ 7 ನೇದವರು ನಾವು ಅಡ್ಡಾಡುವ ಜಾಗೆಯಲ್ಲಿ ಯಾಕ್ ಮಣ್ಣು ಹಾಕಿಸುತ್ತೀರಿ ಅಂತಾ ಕೇಳಿದಾಗ ಆರೋಪಿತರಾದ ನೀವು ಗುಂಪುಕಟ್ಟಿಕೊಂಡು

ಬಂದು ಅಕ್ರಮ ಕೂಟ ರಚಿಸಿಕೊಂಡು **ಭಾರತೀಯ ದಂಡ ಸಂಹಿತೆ ಕಲಂ *143* ಸಹಕಲಂ *149*** ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆ ಮತ್ತು ವಿಚಾರಣಾ ವ್ಯಾಪ್ತಿಯೊಳಗೆ ಅಪರಾಧ ಎಸಗಿರುತ್ತೀರಿ ಅಂತಾ ಆಪಾದಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿವನ್ನು ಹೊಂದಿ ದೊಂಬಿ ಮಾಡಿ **ಭಾರತೀಯ ದಂಡ ಸಂಹಿತೆ ಕಲಂ *147* ಸಹಕಲಂ *149*** ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆ ಮತ್ತು ವಿಚಾರಣಾ ವ್ಯಾಪ್ತಿಯೊಳಗೆ ಅಪರಾಧ ಎಸಗಿರುತ್ತೀರಿ ಅಂತಾ ಆಪಾದಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಮಾರಕಾಸ್ತ್ರಗಳಿಂದ ದೊಂಬಿ ಎಬ್ಬಿಸಿ **ಭಾರತೀಯ ದಂಡ ಸಂಹಿತೆ ಕಲಂ *148* ಸಹಕಲಂ *149* ಅಡಿಯಲ್ಲಿ** ಈ ನ್ಯಾಯಾಲಯದ ಸಂಜ್ಞೆ ಮತ್ತು ವಿಚಾರಣಾ ವ್ಯಾಪ್ತಿಯೊಳಗೆ ಅಪರಾಧ ಎಸಗಿರುತ್ತೀರಿ ಅಂತಾ ಆಪಾದಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು 1ನೇ ಆರೋಪಿತನಾದ ನೀನು ಪಿರ್ಯಾದಿಗೆ ಕೈಯಿಂದಾ ಎದೆಗೆ ಮತ್ತು ಎಡಹುಬ್ಬಿಗೆ ಗುದ್ದಿ, 2ನೇ ಆರೋಪಿತನಾದ ನೀನು ಚಾ.ಸಾ-4 ಇವರ ಎದೆಗೆ ಗುದ್ದಿ, 4ನೇ ಆರೋಪಿತನಾದ ನೀನು ಚಾ.ಸಾ-5 ಇವರಿಗೆ ಕೈಯಿಂದ ಎದೆ ಹಿಡಿದು ದೂಡಿ ನೆಲಕ್ಕೆ ಕೆಡವಿ **ಭಾರತೀಯ ದಂಡ ಸಂಹಿತೆ ಕಲಂ *323* ಸಹಕಲಂ *149*** ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆ ಮತ್ತು ವಿಚಾರಣಾ ವ್ಯಾಪ್ತಿಯೊಳಗೆ ಅಪರಾಧ ಎಸಗಿರುತ್ತೀರಿ ಅಂತಾ ಆಪಾದಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು 1ನೇ ಆರೋಪಿಯಾದ ನೀನು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಕಲ್ಲಿನಿಂದ ಪಿರ್ಯಾದಿಯ ಎಡಗೈ ಮುಂಗೈ ಹತ್ತಿರ ಹೊಡೆದು ಸಾದಾಗಾಯಪಡಿಸಿ ಅಲ್ಲದೇ ಇಟ್ಟಂಗಿ ತುಂಡಿನಿಂದ ಚಾ.ಸಾ-5 ಇವರ ಚಪ್ಪೆಗೆ ಹೊಡೆದು ಸಾದಾಗಾಯಪಡಿಸಿ **ಭಾರತೀಯ ದಂಡ ಸಂಹಿತೆ ಕಲಂ *324* ಸಹಕಲಂ *149* ರಡಿಯಲ್ಲಿ** ಈ ನ್ಯಾಯಾಲಯದ ಸಂಜ್ಞೆ ಮತ್ತು ವಿಚಾರಣಾ ವ್ಯಾಪ್ತಿಯೊಳಗೆ ಅಪರಾಧ ಎಸಗಿರುತ್ತೀರಿ ಅಂತಾ ಆಪಾದಿಸಲಾಗಿದೆ.

ಆರೋಪಿತರಾದ ನೀವು ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಎಲ್ಲರೂ ಸೇರಿ ನಾವು ನಮ್ಮ ಜಾಗೆಯಲ್ಲಿ ಮಣ್ಣು ಹಾಕಿಸಾಕ್ತೇವಿ, ನೀವು ಇನ್ನು ಮುಂದೆ ಇಲ್ಲಿ ಅಡ್ಡಾಡಬೇಡ್ರಿ ನೀವು ಬೇರೆ ದಾರಿಯಲ್ಲಿ ಅಡ್ಡಾಡ್ರಿ , ಇಷ್ಟು ದಿವಸ ನಿಮಗ ನಮ್ಮ ಜಾಗದಗಾ ನಿಮಗ ಅಡ್ಡಾಡಾಕ ಜಗಾ ಬಿಟ್ಟಿದ್ದ ತಪ್ಪಾಗೇತಿ ಸೂಳೆ ಮಕ್ಕಳ ಅಂತಾ ಅಂತಾ ಅವಾಚ್ಯ ಶಬ್ದಗಳಿಂದ ಬೈದು **ಭಾರತೀಯ ದಂಡ ಸಂಹಿತೆ ಕಲಂ *504* ಸಹಕಲಂ *149*** ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆ ಮತ್ತು ವಿಚಾರಣಾ ವ್ಯಾಪ್ತಿಯೊಳಗೆ ಅಪರಾಧ ಎಸಗಿರುತ್ತೀರಿ ಅಂತಾ ಆಪಾದಿಸಲಾಗಿದೆ.

ಆರೋಪಿತರಾದ ನೀವು ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪ ಮಾಡುವ ಸಮಾನ ಉದ್ದೇಶದಿಂದ ಪಿರ್ಯಾದಿದಾರರಿಗೆ ಮತ್ತು ಸಾಕ್ಷಿದಾರರಿಗೆ ಹೊಡೆಯುತ್ತಿರುವದನ್ನು ನೋಡಿ ಇನ್ನುಳಿದ ಸಾಕ್ಷಿದಾರರೆಲ್ಲರೂ ಸೇರಿ ನಿಮಗೆ ಸಿಟ್ಟು ಮಾಡಿ ಜಗಳ ಬಿಡಿಸಿದಾಗ ಆರೋಪಿತರೆಲ್ಲರೂ ಪಿರ್ಯಾದಿ ಮತ್ತು ಇನ್ನುಳಿದವರಿಗೆ ಇನ್ನೊಮ್ಮೆ ನಮ್ಮ ಜಾಗಾದಾಗ ಬಂದ್ರಿ ಅಂದ್ರ ನಿಮ್ಮ ಒಬ್ಬೊಬ್ಬರನ್ನ ಜೀವಂತ ಬಿಡೊದಿಲ್ಲಾ ಅಂತಾ ಜೀವದ ಬೆದರಿಕೆ ಹಾಕಿ **ಭಾರತ ದಂಡ ಸಂಹಿತೆ ಕಲಂ *506* ಸಹಕಲಂ *149*** ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆ ಮತ್ತು ವಿಚಾರಣಾ ವ್ಯಾಪ್ತಿಯೊಳಗೆ ಅಪರಾಧ ಎಸಗಿರುತ್ತೀರಿ ಅಂತಾ ಆಪಾದಿಸಲಾಗಿದೆ.

ದಿನಾಂಕ 16 ನೇ ಮಾರ್ಚ ಮಾಹೆಯ 2021 ನೇ ಇಸ್ವಿ.

**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,**
**ಹಾವೇರಿ.**

**1. ಈ ಮೇಲೆ ಹೇಳಿದ ದೋಷಾರೋಪಣೆಯು ನಿಮಗೆ ಅರ್ಥವಾಗಿದೆಯೇ?**

ಉತ್ತರಃ **1.**

**2.**

**3.**

**4.**

**5.**

**2. ಈ ಮೇಲೆ ಹೇಳಿದ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿರೋ?**

**ಉತ್ತರಃ *1.***

***2.***

***3.***

***4.***

***5.***

**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,**
**ಹಾವೇರಿ.**

***1*** **ನೇ ಆರೋಪಿಯ ಸಹಿಃ**

***2*** **ನೇ ಆರೋಪಿಯ ಸಹಿಃ**

***3*** **ನೇ ಆರೋಪಿಯ ಸಹಿಃ**

***4*** **ನೇ ಆರೋಪಿಯ ಸಹಿಃ**

***5*** **ನೇ ಆರೋಪಿಯ ಸಹಿಃ**